ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (477)335
ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೇರದಾಳ್)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು

ಅ) ಅನಿಯಮಿತ ಲೋಡ್ ಶೆಡ್ಡಿಂಗ್‌ಗೆ ಕಾರಣಗಳೇನು;

ಮುಂಗಾರು ಮಳೆ ವಿಳಂಬವಾದುದರಿಂದ ರಾಜ್ಯದ ಪ್ರಮುಖ ಜಲಾಶಯಗಳ ನೀರಿನ ಮಟ್ಟ ಕುಸಿದಿದೆ. ರಾಯಚೂರು ಶಾಖೋತ್ಪನ್ನ ಕೇಂದ್ರದಲ್ಲಿ 2 ಘಟಕಗಳು ದುರಸ್ಥಿ ಕಾರ್ಯದಲ್ಲಿರುವುದರಿಂದ ಮತ್ತು ಕಲ್ಲಿದ್ದಲಿನ ಕೊರತೆಯಿಂದ ವಿದ್ಯುತ್ ಉತ್ಪಾದನೆ ಕಡಿಮೆಯಾಗಿರುತ್ತದೆ. ಒರಿಸ್ಸಾದ ತಾಲ್ಚೇರ್, ಆಂಧ್ರಪ್ರದೇಶದ ರಾಮಗುಂಡಂ ಹಾಗೂ ತಮಿಳುನಾಡಿನ ನೈವೇಲಿಯಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳ ದುರಸ್ಥಿ ಕಾರ್ಯ ನಡೆಯುತ್ತಿರುವುದರಿಂದ, ಕೇಂದ್ರ ಉತ್ಪಾದನಾ ಘಟಕಗಳಿಂದ ಬರಬೇಕಾದ ಕರ್ನಾಟಕದ ಪಾಲೂ ಸಹ ಕಡಿಮೆಯಾಗಿದೆ. ಹಾಗೂ ಇಂಡಿಯನ್ ಎಲೆಕ್ಟ್ರಿಸಿಟಿ ಗ್ರಿಡ್ ಕೋಡ್ (ಐಇಜಿಸಿ) ಮತ್ತು ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿಇಆರ್‌ಸಿ) ನಿಯಮಗಳ ಪ್ರಕಾರ ವಿದ್ಯುತ್ ಜಾಲದ ತರಂಗಾಂತರವನ್ನು 49 ತರಂಗಗಳಿಗಿಂತ ಹೆಚ್ಚಿಗೆ ಇರುವಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ವಿದ್ಯುತ್ತಿನ ಲಭ್ಯತೆಗೆ ತಕ್ಕಂತೆ ವಿದ್ಯುತ್ತಿನ ಬಳಕೆಯನ್ನು ನಿಯಂತ್ರಿಸಲು ಅನಿಯವಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಇಡೀ ವಿದ್ಯುತ್ ವ್ಯವಸ್ಥೆಯೇ ಸಂಪೂರ್ಣವಾಗಿ ಕುಸಿಯುವ ಸಂಭವವಿರುತ್ತದೆ.

ಆ) ಲೋಡ್ ಶೆಡ್ಡಿಂಗ್‌ನ್ನು ಅಧಿಕೃತವಾಗಿ ಪ್ರಕಟಪಡಿಸಲು ಇರುವ ತೊಂದರೆಗಳೇನು;

ಶೀಘ್ರದಲ್ಲಿಯೇ ಲೋಡ್ ಶೆಡ್ಡಿಂಗ್‌ನ್ನು ಅಧಿಕೃತವಾಗಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಇ) ಸ್ಥಿತಿ ಎಲ್ಲಿಯವರೆಗೆ ಮುಂದುವರೆಯುವುದು; ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ ಎಂದಿನಿಂದ ಅದನ್ನು ಜಾರಿಗೆ ತರಲಾಗುವುದು;

ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವಂತೆ ಮುಂಗಾರು ಮಳೆಯ ವಿಫಲತೆ, ಕಲ್ಲಿದ್ದಲಿನ ಕೊರತೆ ಮತ್ತು ವಿದ್ಯುತ್ ಉತ್ಪಾದನಾ ಘಟಕಗಳ ದುರಸ್ಥಿ ಕಾರ್ಯಗಳಿಂದ ರಾಜ್ಯಕ್ಕೆ ಲಭ್ಯವಾಗುತ್ತಿದ್ದ ವಿದ್ಯುತ್ತಿನ ಪ್ರಮಾಣವು ಕಡಿಮೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಮುಂಗಾರು ಚುರುಕುಗೊಂಡಲ್ಲಿ ಹಾಗೂ ದುರಸ್ಥಿ ಕಾರ್ಯದಲ್ಲಿರುವ ಈ ಮೇಲಿನ ವಿದ್ಯುತ್ ಉತ್ಪಾದನಾ ಘಟಕಗಳು

ಕಾರ್ಯಾರಂಭಗೊಂಡ ನಂತರ ವಿದ್ಯುತ್ ಪರಿಸ್ಥಿತಿಯಲ್ಲಿ ಸುಧಾರಣೆಯಾಗುವ ಸಾಧ್ಯತೆ ಇರುತ್ತದೆ. ಅಲ್ಲಿಯವರೆಗೆ, ವಿದ್ಯುತ್ ಲಭ್ಯತೆಗೆ ತಕ್ಕಂತೆ ವಿದ್ಯುತ್ತಿನ ಬಳಕೆಯನ್ನು ನಿಯಂತ್ರಿಸುವುದು ಅನಿವಾರ್ಯವಾಗಿರುತ್ತದೆ.

ರಾಜ್ಯವು ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲು ಈ ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಕ್ಟೋಬರ್ 2008 ರಿಂದ ಜನವರಿ 2009 ರವರೆಗಿನ ಕನಿಷ್ಠ 100 ಮೆ.ವ್ಯಾಟ್‌ನಿಂದ ಗರಿಷ್ಠ 700 ಮೆ.ವ್ಯಾಟ್‌ಗಳ ಮಿತಿಗೆ ಒಳಪಟ್ಟು ವಿದ್ಯುತ್ತನ್ನು ಖಚಿತ / ಒಂದು ದಿನ ಮುಂಚಿತ (ಡೇ ಅಹೆಡ್) ಆಧಾರಿತ ರೀತಿಯಲ್ಲಿ ಪಡೆಯಲು ಬಿಡ್ಡುಗಳನ್ನು ಆಹ್ವಾನಿಸಲಾಗಿರುತ್ತದೆ.
2. ದಿನ ನಿತ್ಯ ವಿದ್ಯುತ್ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು "ಇಂಡಿಯನ್ ಎನರ್ಜಿ ಎಕ್ಸ್‌ಚೆಂಜ್" ಮೂಲಕ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.
3. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಘಟಕ ಕಾರ್ಯಾರಂಭ ಮಾಡಿದ್ದು, ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿದೆ.
4. ಲಭ್ಯತೆ ಆಧಾರಿತ ದರದ ಪ್ರಕಾರ ಅನುಕೂಲಕರ ಜಾಲ ತರಂಗವಿದ್ದಾಗ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲಾಗುತ್ತಿದೆ.
5. ಜಲಾಶಯಗಳಲ್ಲಿ ನೀರಿನ ಪ್ರಮಾಣವನ್ನು ಹೆಚ್ಚಿಸಲು ಮೋಡ ಬಿತ್ತನೆ ಕಾರ್ಯದ ಅನುಷ್ಠಾನವನ್ನು ಶೀಘ್ರದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದ್ದು, ಈ ಕಾರ್ಯವನ್ನು ಜಲಸಂಪನ್ಮೂಲ ಇಲಾಖೆಗೆ ವಹಿಸಲಾಗಿದೆ.
6. ಛತ್ತೀಸ್‌ಘಡದಿಂದ ರಾಜ್ಯಕ್ಕೆ 300 ಮೆ.ವ್ಯಾಟ್ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲು ಸರ್ಕಾರದಿಂದ ಪತ್ರ ವ್ಯವಹಾರವನ್ನು ಮಾಡಲಾಗುತ್ತಿದೆ. ಛತ್ತೀಸ್‌ಘಡ್ ರಾಜ್ಯವು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದು, ಶೀಘ್ರದಲ್ಲಿಯೇ 100 ಮೆಗಾವ್ಯಾಟ್ ವಿದ್ಯುತ್ ನೆರವು ಲಭ್ಯವಾಗುವ ಸೂಚನೆಗಳಿವೆ.
7. ಕಲ್ಲಿದ್ದಲು ಕೊರತೆಯ ನಿವಾರಣೆಗೆ ಮಹಾನದಿ ಕಲ್ಲಿದ್ದಲು ಗಣಿಯಿಂದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರಕ್ಕೆ ಕಲ್ಲಿದ್ದಲಿನ ಸಾಗಾಣಿಕೆ ವ್ಯವಸ್ಥೆಗಾಗಿ ಸರ್ಕಾರದಿಂದ ಕ್ರಮ ಜರುಗಿಸಲಾಗುತ್ತಿದೆ.
8. ಅಸಂಪ್ರದಾಯಿಕ ಇಂಧನ ಉತ್ಪಾದಕರಣದ ಹೆಚ್ಚಿನ ವಿದ್ಯುತ್‌ನ್ನು ಸರಬರಾಜು ಮಾಡುವಂತೆ ಕೊರಲಾಗಿದೆ.
9. ವಿದ್ಯುತ್‌ನ್ನು ಸರಬರಾಜು ಮಾಡುವ ಬಗ್ಗೆ ಮುಕ್ತ ಪ್ರವೇಶಾವಕಾಶದಡಿ ಬರುವ ವಿದ್ಯುತ್ ಉತ್ಪಾದಕರೊಂದಿಗೆ ಮಾತುಕತೆ ನಡೆಸಲಾಗುತ್ತಿದೆ.

ಈ) ಸ್ಥಿತಿಯಿಂದ ಮೇಲಿಂದ ಮೇಲೆ ಟಿ.ಸಿ.(ಪರಿವರ್ತಕ)ಗಳು ಸುಟ್ಟು ಹೋಗುತ್ತಿದ್ದು. ಇದರಿಂದ ರೈತರಿಗೆ ಬಹಳ ತೊಂದರೆ ಆಗಿದ್ದು, ಇದನ್ನು ಯಾವ ರೀತಿ ಸರಿಪಡಿಸಲಾಗುವುದು?

ಲೋಡ್ ಶೆಡ್ಡಿಂಗ್ ನಿರ್ವಹಣೆಗಾಗಿ ಪರಿವರ್ತಕಗಳು ವಿಫಲಗೊಳ್ಳುವ ಸಾಧ್ಯತೆಗಳು ಇರುವುದಿಲ್ಲ. ಒಂದು ವೇಳೆ, ಓವರ್ ಲೋಡ್ ಅಥವಾ ತಾಂತ್ರಿಕ ದೋಷಗಳಿಂದ ಪರಿವರ್ತಕಗಳು ವಿಫಲಗೊಂಡಲ್ಲಿ, ಅವುಗಳನ್ನು ಬೇರೆ ಒಳ್ಳೆಯ ಪರಿವರ್ತಕಗಳ ಮೂಲಕ ಬದಲಾಯಿಸಲಾಗುತ್ತಿದೆ.

ಓವರ್ ಲೋಡ್ ಸಮಸ್ಯೆಗಳಿಂದ ಪರಿವರ್ತಕಗಳು ವಿಫಲಗೊಳ್ಳುವುದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಹಾಲಿ ಇರುವ ಪರಿವರ್ತಕಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು, ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸುವುದು ಮುಂತಾದ ಸುಧಾರಣಾ ಕಾರ್ಯಗಳನ್ನು ಸಹ ಕೈಗೊಳ್ಳಲಾಗುತ್ತಿದೆ.

ಊ) ಪರಿವರ್ತಕಗಳು ಸುಟ್ಟಾಗ ದುರಸ್ತಿ ಮಾಡಿಕೊಡುವ ಅಥವಾ ಹೊಸ ಪರಿವರ್ತಕಗಳನ್ನು ಕೊಡಲು ಇರುವ ನಿಯಮಾವಳಿಗಳೇನು; ಎಷ್ಟು ದಿನಗಳಲ್ಲಿ ಇವುಗಳನ್ನು ನೀಡಲಾಗುವುದು?

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಾವಳಿಗಳ ಪ್ರಕಾರ ನಗರ ಪ್ರದೇಶಗಳಲ್ಲಿ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಒಂದು ದಿನದ ಒಳಗಾಗಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಮೂರು ದಿನಗಳ ಒಳಗಾಗಿ ಬದಲಾಯಿಸಬೇಕೆಂಬ ನಿಯಮಗಳಿರುತ್ತವೆ.

ಕುಡಿಯುವ ನೀರಿನ ಸ್ಥಾವರಗಳಿಗೆ ಹಾಗೂ ಗ್ರಾಮಗಳ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡುವ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಂಡಾ ಅವುಗಳನ್ನು ಮೊದಲ ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತದೆ. ಉಳಿದ ಪ್ರಕರಣಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಳ್ಳುವ ದಿನಾಂಕಗಳ ಪ್ರಕಾರ ಜೇಷ್ಯತೆಯನ್ನು ಆಧಾರ ಮಾಡಿಕೊಂಡು ದುರಸ್ತಿಗೊಂಡ ಅಥವಾ ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಡಲು ವಿದ್ಯುತ್ ಸರಬರಾಜು ಕಂಪನಿಗಳು ಕ್ರಮ ತೆಗೆದುಕೊಳ್ಳುತ್ತಿವೆ.

ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ಅನುಸರಿಸಲಾಗುವ ವಿಧಿ ವಿಧಾನಗಳ ವಿವರಗಳು:

1. ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಪಡಿಸಲು ಟೆಂಡರ್‌ಗಳನ್ನು ಕರೆದು ಗೊತ್ತುಪಡಿಸಿದ ರೇಟ್ ಕಾಂಟ್ರಾಕ್ಟ್ ಆಧಾರದ ಮೇಲೆ ಆಯಾ ವಿಭಾಗದ

ವ್ಯಾಪ್ತಿಯಲ್ಲಿರುವ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳಲ್ಲಿ ದುರಸ್ತಿ ಮಾಡಲಾಗುವುದು.

2. ಸರ್ಕಾರಿ ಸ್ವಾಮ್ಯದ ಮೆ: ಕ.ವಿ.ಕಾ ಸಂಸ್ಥೆಗೆ ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಕಾರ್ಯನಿರ್ವಹಿಸಲು ಕ್ರಮಗಳನ್ನು ರೂಪಿಸಲಾಗುತ್ತಿದೆ.

3. ಖಾತರೀ ಅವಧಿಯಲ್ಲಿ ವಿಫಲಗೊಳ್ಳುವ ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಬಂಧಪಟ್ಟ ಸರಬರಾಜು ಸಂಸ್ಥೆಗಳು/ದುರಸ್ಥಿ ಏಜೆನ್ಸಿಗಳು ತಮ್ಮ ವೆಚ್ಚದಲ್ಲಿಯೇ ದುರಸ್ತಿ ಮಾಡಬೇಕಾಗಿರುತ್ತದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (478)336
ಸದಸ್ಯರ ಹೆಸರು : ಶ್ರೀ ಸಿದ್ದುಸವದಿ (ತೇರದಾಳ್)
ಉತ್ತರಿಸುವ ಸಚಿವರು : (ಶ್ರೀ ಶೋಭಾ ಕರಂದ್ಲಾಜೆ)

1 ತೇರದಾಳ ಮತಕ್ಷೇತ್ರಕ್ಕೆ ಸೇರಿದ ಬಹುತೇಕ ಎಲ್ಲಾ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೆಲವು ಗ್ರಾಮೀಣ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2 ಹಾಗಿದ್ದಲ್ಲಿ ಅವುಗಳ ದುರಸ್ತಿ ಕಾರ್ಯವನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು;

3 ಯಾವ ಯಾವ ರೀತಿ ಮತ್ತು ಎಷ್ಟು ಕಿ.ಮೀ ರಸ್ತೆಗಳನ್ನು ಈ ವರ್ಷದಲ್ಲಿ ಅಭಿವೃದ್ಧಿ ಪಡಿಸಲಾಗುವುದು;

ಪ್ರಸ್ತುತ ಸಾಲಿನಲ್ಲಿ ಜಿಲ್ಲಾ ಪಂಚಾಯಿತಿಗೆ ಒದಗಿಸಲಾಗುವ ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ, 12ನೇ ಹಣಕಾಸು ಆಯೋಗದ ಯೋಜನೆ ಮತ್ತು 5054ರಡಿ ಅನುದಾನ ಲಭ್ಯತೆಗನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ನಿರ್ದಿಷ್ಟ ಗ್ರಾಮೀಣ ರಸ್ತೆಗಳ ಆಯ್ಕೆ ಹಾಗೂ ನಿರ್ವಹಣೆ/ಅಭಿವೃದ್ಧಿ ಕಾರ್ಯವು ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

4 ತೇರದಾಳ ಮತಕ್ಷೇತ್ರದಲ್ಲಿ ಈ ಇಲಾಖೆಗೆ ಸೇರಿದ ರಸ್ತೆಗಳು ಯಾವುವು ಮತ್ತು ಅವುಗಳ ವಿಸ್ತೀರ್ಣವೆಷ್ಟು; ಅವುಗಳ ಈಗಿನ ಸ್ಥಿಗತಿಗಳೇನು;

ತೇರದಾಳ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿಸ್ತೀರ್ಣ ಮತ್ತು ಅವುಗಳ ಸ್ಥಿತಿ ಕೆಳಗಿನಂತಿವೆ.

ಕ್ರ.ಸಂ.	ರಸ್ತೆ ವಿವರ	ಉದ್ದ(ಕಿ.ಮೀ)
1	ಡಾಂಬರು	166